ಗಮನಕ್ಕೆ ಬಂದಿದೆಯೆ, ಅದರ ಬಗ್ಗೆ ತೀವ್ರವಾಗಿ ಯಾವಾಗ ಕ್ರಮ ತೆಗೆದುಕೊಳ್ಳುತ್ತಿರಾ ಅಲ್ಲಿ ಬೇಸಿಗೆ ಕಾಲದಲ್ಲಿ ನೀರು ಕುಡಿಯಲಿಕ್ಕಿಲ್ಲ ಈಗಾಗಲೇ ಟಿ. ಡಿ ಬಿ. ಯವರು ಪ್ರಯತ್ನಪಟ್ಟು ಫೈಲ್ ಆಗಿದ್ದಾರೆ ಈಗಾಗಲೇ ಆ ಪ್ರದೇಶಗಳಿಗೆ ಸ್ಟೇಟ್ ಜಿಯಾಲಿಜಿಸ್ಟ್ ಕೂಡ ಬಂದು ಪರೀಕ್ಷೆ ಮಾಡಿ ಹೋಗಿದ್ದಾರೆ. ಆದರೂ ಕೂಡ ಇಷ್ಟು ವಿಳಂಬ ಏತಕ್ಕೆ ಆಗುತ್ತಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೆ, ೧೯೭೯-೮೦ರ ರೊಳಗೆ ಕೇಂದ್ರ ಹಾಗೂ ರಾಜ್ಯದ ಎರಡರ ವಾಪ್ತಿಯೊಳಗೆ ಸೇರಿಕೊಂಡು ಬಂದಿರಲಿಲ್ಲ. ಈಗತಾನೇ ನಮ್ಮ ಮುಂದೆ ಬಂದಿದೆ. ನಾನು ಕೂಡ ಹೋಗಿ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ಏನು ಇದೆ ಎನ್ನುವುದು ಅರ್ಥವಾಗಿದೆ. ಅದಷ್ಟು ಶೀಘ್ರವಾಗಿ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ವ್ಯವಸ್ಥೆ ಮಾಡುತ್ತೇನೆ.

Kannada and Urdu Primary Schools in Bailhongal Constituency.

472 SRI R. C BALE KUNDARGI (Bailhongal).— Will the Minister for Education be pleased to state.—

(a) the number of Kannada and Urdu (Primary) Schools coming under Bailhongal Assembly Constituency ;

(b) the number of Kannada and Urdu Schools owning separate (Government) Building;

(c) the number of Urdu and Kannada Schools working under Bailhongal Municipality ;

(d) the number of Urdu and Kannada Schools coming under Municipality having own buildings (Urdu and Kannada School buildings may please be given separately)?

SRI G. S. SHANKAR RAO (Minister for Education).—

	Kannada	Urdu
(a)	74	8
(b)	70	2
(c)	5	2
(d)	3	1

ಶ್ರೀ ಆರ್. ಸಿ. ಬಾಳೆಕುಂದರ್ಗಿ.—ಅಧ್ಯಕ್ಷರೆ, ಮಾನ್ಯ ಮಂತಿಗಳ ಉತ್ತರದಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಉರ್ದು ಶಾಲೆಯ ಬಿಲ್ಡಿಂಗ್ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಅದು ಸರ್ಕಾರಿ ಬಿಲ್ಡಿಂಗ್ ಅಲ್ಲ ಅಂತ ನನ್ನ ಅಭಿಪ್ರಾಯ. ಏಕೆಂದರೆ ಅಲ್ಲಿರುವಂತಹ ಉರ್ದು ಶಾಲೆಯನ್ನು ೨೦ ವರ್ಷದ ಹಿಂದೆ ಸ್ಯಾಲರಿ ಹಂಚುವ ಮನುಷ್ಯನಿಂದ ಹಣ ದುರುಪಯೋಗವಾಗಿದೆ ಅಂತ ಅವನಿಂದ ತೆಗೆದುಕೊಂಡಿರ ತಕ್ಕದ್ದು. ಅಲ್ಲಿ ಎರಡು ಸಣ್ಣ ರೂಮುಗಳು ಮಾತ್ರ ಇವೆ. ಮೂರು ನಾಲ್ಕು ಜನ ಶಿಕ್ಷಕರು ಇದ್ದಾರೆ. ನಾವು ಅಲ್ಲಿಗೆ ಹೋದಾಗ ನಮ್ಮ ಮುಸ್ಲಿಮ್ ಭಾಂದವರು ಕನ್ನಡ ಶಾಲೆಗಳು ಮೂರು ಇದೆ. ಉರ್ದು ಶಾಲೆ ಒಂದು ಮಾತ್ರ ಇದೆ ಎನ್ನುವ ದೂರನ್ನು ಹೇಳುತ್ತಿದ್ದಾರೆ. ಆದುದರಿಂದ ಈ ವರ್ಷದ ಅಲಾಟ್‌ಮೆಂಟಿನಲ್ಲಿ ಸುಮಾರು ನಾಲ್ಕು ರೂಮುಗಳನ್ನಾದರೂ ಉರ್ದು ಶಾಲೆಗಳಿಗೆ ಬಿಡುಗಡೆ ಮಾಡ ಬೇಕೆಂದು ಸೂಚನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತೀರಾ ?

† ಶ್ರೀ ಜಿ. ಬಿ. ಶಂಕರ್‌ರಾವ್.—ಅಧ್ಯಕ್ಷರೆ, ಸರ್ಕಾರದ ಕಟ್ಟಡ ಅಂತ ಹೇಳಿದ್ದೇವೆ. ಈಗ ಅಲ್ಲಿ ಶಾಲಾ ಕಟ್ಟಡ ಸರಿಯಾಗಿದೆ. ಹೊಸ ಕಟ್ಟಡ ಕಟ್ಟಿಸಬೇಕು ಅಂತ ಅಭಿಪ್ರಾಯ ಮಾನ್ಯ ಸದಸ್ಯರಿಗೆ ಇದ್ದರೆ, ನಾವು ಡೆಪ್ಯುಟಿ ಕಮಿಷನರ್‌ಗೆ ಹಣ ಕೊಟ್ಟಿರುತ್ತೇವೆ. ಮಾನ್ಯ ಸದಸ್ಯರು ತನ್ನ ಪ್ರಭಾವ

ಬೀರಿ ತಾಲ್ಲೂಕು ಬೋರ್ಡ್‌ನವರಿಗೆ ಸಾರ್ವಜನಿಕ ವಂತಿಕೆಯನ್ನು ಕೊಡಿಸಿಕೊಡಿ. ನಾವು ಕೂಡ ಈ ಶಾಲಾ ಕಟ್ಟಡ ಕಟ್ಟುತಕ್ಕ ಜವಾಬ್ದಾರಿಯನ್ನು ಹೊತ್ತಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳವರಿಗೆ ಆದೇಶ ಕೊಡುತ್ತೇವೆ.

ಶ್ರೀ ಆರ್. ಪಿ. ಬಾಳೆಕುಂದರ್ಗಿ.—ನಗರ ಸಭೆ ವತಿಯಿಂದ ವಂತಿಕೆಯನ್ನು ಕೊಡಿಸುವುದಕ್ಕೆ ಸಿದ್ಧ ನಿದ್ದೇನೆ. ಸರ್ಕಾರ ಹೆಣ್ಣುಮಕ್ಕಳ ಉರ್ದು ಶಾಲೆಯ ೪ ರೂಮುಗಳನ್ನು ಕಟ್ಟಿಸಿಕೊಡುವುದಕ್ಕೆ ನನ್ನ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಆಜ್ಞೆ ಕೊಡಬೇಕು. ಏಕೆಂದರೆ ಈ ಪ್ರಯತ್ನವನ್ನು ಕಳೆದ ಎರಡು ವರ್ಷಗಳಿಂದಲೂ ಮಾಡುತ್ತಿದ್ದೇವೆ. ಆದರೆ ಆದು ಫಲಕಾರಿಯಾಗಿಲ್ಲ. ಇದರಿಂದ ನಮ್ಮ ಭಾಗದ ಮುಸ್ಲಿಂ ಭಾಂದವರು ಉರ್ದು ಶಾಲೆಗಳ ಬಗ್ಗೆ ಸರ್ಕಾರಕ್ಕೆ ತಾತ್ಸಾರ ಮನೋಭಾವ ಇದೆ ಎಂಬುದಾಗಿ ತಿಳಿದು ಕೊಂಡಿರುತ್ತಾರೆ. ಆದ್ದರಿಂದ ನಮ್ಮ ಭಾಗದ ವಂತಿಕೆಯನ್ನು ಕೊಡಿಸುವುದಕ್ಕೆ ಸಿದ್ಧನಿದ್ದೇನೆ. ಶಾಲೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ನಾಲ್ಕೂವರೆ ಸಾವಿರ ರೂಪಾಯಿಗಳನ್ನು ನಾವು ಕೊಡುತ್ತೇವೆ. ಇನ್ನುಳಿದ ಹಣವನ್ನು ನಗರಸಭೆಯ ವತಿಯಿಂದ ಪಂತಿಕೆ ರೂಪದಲ್ಲಿ ಕೊಡಿಸುವುದಾದರೆ ನಾನು ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಉರ್ದು ಶಾಲೆಯ ೪ ರೂಮುಗಳನ್ನು ಕಟ್ಟಿಸಿಕೊಡಬೇಕೆಂದು ಸೂಚನೆಯನ್ನು ಕೊಡುತ್ತೇನೆ.

Construction of Bus Stands at Raibag and Kudachi

492 SRI R. S. NADONI (Raibag).—Will the Minister for Transport and Minor Irrigation be pleased to state,—

(a) whether they have received repesentations for the formation of Kudachi–Raibag Horegeri Cross and for construction of Bus Stands in Raibag taluk ;

(b) if so, the steps taken by them in this regard ;

(c) the names of sites consi ered so for the construction of the Bus Stand and whether any land is acquired for the purpose ?

SRI M. M. J. SADYOJATHA (Minister for Transport and Minor Irrigation.)—

(a) (1 Representations have not been received for the formation of Kudachi–Raibag Horogeri Cross in Raibag taluk.

(2) Representations have been received for construction of Bus–stands.

(b) Karnataka State Road Transport Corporation has decid d to construct Bus–stands at Kudachi and Raibag.

(c) (i) Survey No. 12-I has been acq ired in Raibag

(ii) Decision has been taken to acquire Survey No. 364–1 in Kuda hi.

ಶ್ರೀ ಆರ್. ಎಸ್. ನಾಡೋಣಿ.—ರಾಯಬಾಗ ತಾಲ್ಲೂಕಿನ ಕುಡಚಿ ರಾಯಬಾಗ ಹಾರೆ ಗೇರಿ ಯಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸುವುದಕ್ಕೆ ಮನವಿಗಳು ಸರ್ಕಾರಕ್ಕೆ ಬಂದಿದ್ದರೂ ಕೂಡ ಇಲ್ಲಿಯವರೆಗೂ ಬಸ್ ನಿಲ್ದಾಣಗಳನ್ನು ಕಟ್ಟದಿರುವುದಕ್ಕೆ ಕಾರಣ ಏನು? ಸರ್ಕಾರಕ್ಕೆ ಇರತಕ್ಕ ತೊಂದರೆ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುವರೇ?